21

**ದಿನಾಂಕ:6-1-2006 ರಂದು ಬೆಳಿಗ್ಗೆ: 11-00 ಗಂಟೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಶ್ರೀ ಅನಂತ ಕುಮಾರ ಹೆಗಡೆ, ಮಾನ್ಯ ಲೋಕಸಭಾ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕೇಂದ್ರ ಜಾಗೃತ ಮತ್ತು ಮೇಲ್ವಿಚಾರಣಾ ಸಮಿತಿಯು ಕೈಕೊಂಡ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಮಟ್ಟದ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಪರಿಶೀಲನೆಯ ನಡುವಳಿಗಳು:**

====

ಪ್ರಾರಂಭದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸಭೆಗೆ ಆಗಮಿಸಿದ ಕೆನರಾ ಕ್ಷೇತ್ರದ ಲೋಕಸಭಾ ಸದಸ್ಯರೂ ಹಾಗೂ ಜಿಲ್ಲೆಯ ಜಾಗೃತ ಮತ್ತು ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರೂ ಆಗಿರುವ ಮಾನ್ಯ ಶೀ ಅನಂತಕುಮಾರ ಹೆಗಡೆಯವರನ್ನು ಹಾಗೂ ಜಾಗೃತ ಸಮಿತಿಯ ಇತರ ಸದಸ್ಯರುಗಳನ್ನು, ಜಿಲ್ಲಾಧಿಕಾರಿಗಳನ್ನು ಮತ್ತು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಮಾನ್ಯ ಅಧ್ಯಕ್ಷರಿಗೆ ಸಭೆಯ ಅಧ್ಯಕ್ಷತೆ ವಹಿಸಿ ಕಾರ್ಯಕಲಾಪಗಳನ್ನು ನಡೆಸಿಕೊಡುವಂತೆ ಕೋರಿದರು.

ಮಾನ್ಯ ಅಧ್ಯಕ್ಷರು ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿ ಜಾಗೃತ ಮತ್ತು ಮೇಲ್ವಿಚಾರಣ ಸಮಿತಿಯ ಮಹತ್ವದ ಕೆಲಸವು ಜಿಲ್ಲೆಯಲ್ಲಿ ಕೇಂದ್ರ ವಲಯದಡಿ ನೀಡಿದ ಅನುದಾನದ ಸದ್ವಿನಿಯೋಗ ಹಾಗೂ ಅಂತಹ ಯೋಜನೆಗಳಿಂದ ಜನಸಾಮಾನ್ಯ ಹಾಗೂ ಕಡುಬಡವ ಕುಟುಂಬಗಳಿಗಾಗಿ ಅನುಕೂಲವಾಗಿದೆಯೇ ಹೇಗೆ ಎನ್ನುವದನ್ನು ಮನದಟ್ಟು ಮಾಡುವದಾಗಿರುತ್ತದೆ ಎಂದು ವಿವರಿಸಿ ಜಿಲ್ಲಾ ಪಂಚಾಯತದಿಂದ ಅನುಷ್ಠಾನ ಗೊಳಿಸಲಾದ ಕೇಂದ್ರವಲಯ ಅನುದಾನದ ಯೋಜನೆಗಳ ಪರಿಶೀಲನೆ ಕೈಗೊಂಡರು.

<u>S.G.R.Y. :</u> ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಯೋಜನೆಯಡಿ 31-12-2005ರ ಅಂತ್ಯದವರೆಗೆ ರೂ.525.527ಲಕ್ಷ ಬಿಡುಗಡೆಯಾಗಿದ್ದು, ರೂ.427.795ಲಕ್ಷಗಳನ್ನು ಬಳಕೆ ಮಾಡಿದ್ದು ಶೇ.80ರಷ್ಟು ಸಾಧನೆಯಾಗಿರುವದಾಗಿ ವಿವರಿಸಿದರು.

ಮಾನ್ಯ ಅಧ್ಯಕ್ಷರು ಈ ಯೋಜನೆಯಡಿ ಗ್ರಾಮಗಳಲ್ಲಿರುವ ನಿರುದ್ಯೋಗ ಕೂಲಿಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸತಕ್ಕದ್ದು ಹಾಗೂ ಜಿಲ್ಲಾ ಪಂಚಾಯತದಿಂದ ಅನುಷ್ಠಾನಗೊಳಿಸಿದ ಪ್ರತಿಯೊಂದು ಕಾಮಗಾರಿಗಳಿಗೆ ನಾಮಫಲಕಗಳನ್ನು ಅವಶ್ಯಕವಾಗಿ ಹಾಕುವಂತೆ ಸೂಚಿಸಿದರು.

<u>S.G.S.Y. (ಸ್ವರ್ಣ ಜಯಂತಿ ಗ್ರಾಮ ರೋಜಗಾರ ಯೋಜನೆ):</u>

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸದರಿ ಯೋಜನೆ ಬಗ್ಗೆ ವಿವರಿಸುತ್ತ, ಸ್ವ-ಸಹಾಯ ಗುಂಪುಗಳ ಮುಖಾಂತರ ಕೆಲಸವನ್ನು ಮಾಡುವುದೇ ಇದರ ಉದ್ದೇಶ. ರೂ. 84.00 ಲಕ್ಷದ ಯೋಜನೆ ಇದೆ. ಪ್ರಗತಿ ಶೇ. 74 ಆಗಿದೆ. ಗ್ರಾಮ ಪಂಚಾಯತ ಮುಖಾಂತರ ಸಬ್ಸಿಡಿ ಹಣ ಕೊಡಲು ಈಗಾಗಲೇ ಸಂಬಂಧಿಸಿದ ಗ್ರಾಮ ಪಂಚಾಯತಿಗಳಿಗೆ ಹಣ ಬಿಡುಗಡೆ ಮಾಡಲಾಗಿದೆ ಎಂದು ಸಭೆಗೆ ವಿವರಿಸಿದರು. ಸದಸ್ಯರಾದ ಶ್ರೀಮತಿ ಸುಧಾ ಗೌಡರು ಮಾತನಾಡಿ 2004-05 ನೇ ಸಾಲಿನಲ್ಲಿ ಕೊಡ ಮಾಡಿದ ಅನುದಾನದ ಕುರಿತು ಮೇಲ್ವಿಚಾರಣೆ ಮಾಡಲಾಗಿದೆಯೇ ಹೇಗೆ ಎಂದು ಪ್ರಶ್ನಿಸಿದರು.

2004-05 ನೇ ಸಾಲಿನಲ್ಲಿ ಹನೇಹಳ್ಳಿ ಗ್ರಾಮದಲ್ಲಿ ರೂ.2.48 ಲಕ್ಷ ಸಾಲ ಕೊಟ್ಟಿದ್ದು ರೂ.1.24 ಲಕ್ಷ ಸಬ್ಸಿಡಿ ನೀಡಿದ್ದು ಮೀನುಮಾರುಕಟ್ಟೆ ಸುಧಾರಣೆ ಎಂದು ವಿವರಿಸಿದ್ದು ಸದರ ಗ್ರಾಮದಲ್ಲಿ ಇಂತಹ ಯಾವದೇ ಯೋಜನೆ ಕಾರ್ಯಗತವಾಗಿರುವುದು ಕಂಡು ಬರುತ್ತಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಇದೇ ರೀತಿ ರೈತ ಮಹಿಳೆಯರ ಸಂಘಕ್ಕೂ ಸಹ ಮೀನು ಸಂಸ್ಕರಣೆ ಮತ್ತು ಮಾರಾಟ ಎಂದು ಸಾಲ ನೀಡಿದ ಬಗ್ಗೆಯು ಸಭೆಯ ಗಮನಕ್ಕೆ ತಂದು. ಈ ಕುರಿತು ಸೂಕ್ತ ಪರಿಶೀಲನೆ ಅವಶ್ಯವಿರುತ್ತದೆ ಎಂದರು.

ಜಿಲ್ಲಾಧಿಕಾರಿಗಳು ಕುಮಟಾ ಕಾರ್ಯನಿರ್ವಾಹಕ ಅಧಿಕಾರಿಗೆ ಈ ಬಗ್ಗೆ ವಿವರ ಕೇಳಲಾಗಿ, ಮೀನುಗಾರಿಕಾ ಇಲಾಖೆಯವರು ತಿಳಿಸಿದ ಪ್ರಕಾರ project report ಪಡೆದು ಸಬ್ಸಿಡಿ ಕೊಡಲಾಗಿದೆ ಎಂದು ತಿಳಿಸಿದರು. ಹನೇಹಳ್ಳಿ,ನಾಡುಮಾಸ್ಕೇರಿ ಮತ್ತು ಅಕ್ಕಪಕ್ಕದ ಗ್ರಾಮಗಳಿಗೆ ಕೊಡಲಾಗಿದ್ದು ಅಲ್ಲಿ ತಮ್ಮ ವಿವರವನ್ನು ಇಟ್ಟುಕೊಂಡಿದ್ದಾರೆ ಎಂದು ಸಭೆಗೆ ತಿಳಿಸಿದರು.

ಒಂದೇ ಕ್ಷೇತ್ರದ 19 ಪ್ರಕರಣದಲ್ಲಿ ಸಾಲ ನೀಡಿದ ಬಗ್ಗೆ ವಿಚಾರಣೆ ಆಗಬೇಕೆಂದು ಮು.ಕಾ.ನಿ.ಅ.ರವರಿಗೆ ಸೂಚಿಸಲಾಯಿತು.

ಮಾನ್ಯ ಅಧ್ಯಕ್ಷರು Project & Programme ಯಾವ ಆಧಾರದ ಮೇಲೆ ಮಾಡಿದ್ದಾರೆ ಎಂದು ಪ್ರಶ್ನಿಸಿದರು ? ಯಾವ ಉದ್ಯಮ ಈ ಜಿಲ್ಲೆಯಲ್ಲಿ ಮಾಡಬಹುದೆಂದು ಕೇಳಿದರು ?

ಮು.ಕಾ.ನಿ.ಅ.ರವರು ಈ ಜಿಲ್ಲೆಯಲ್ಲಿ ಹೈನುಗಾರಿಕೆ ಮಾಡಬಹುದು. ಇದಕ್ಕೆ ಒಳ್ಳೆಯ ಅವಕಾಶ ಇದೆ. ಬ್ಯಾಂಕ್ ಮುಖಾಂತರ ಕೂಡ ಸಾಲ ಮತ್ತು ಸಹಾಯ ಧನ ಸಿಗುತ್ತದೆ. ತರಕಾರಿ ಬೆಳೆಯುವುದು, ರೆಡಿಮೆಡ್ ಗಾರ್ಮೆಂಟ್ಸ್, ಕುಂಬಾರಿಕೆ, ಹೂವಿನ ಕೃಷಿ ಇದನ್ನೂ ಕೂಡ ಮಾಡಲು ಅವಕಾಶವಿರುವುದಾಗಿ ತಿಳಿಸಿದರು.

ಅಧ್ಯಕ್ಷರು ಮಾತನಾಡಿ 10 ಚಟುವಟಿಕೆಗಳನ್ನು ಆಯ್ಕೆ ಮಾಡುತ್ತೀರಿ. ಇಂತಹ ಉದ್ಯೋಗಗಳನ್ನು ಮಾಡಬಹುದೆಂದು ಸರ್ವೆ ಮಾಡುತ್ತೀರಿ. ಅದಕ್ಕೆ ನೀವು 10 ಪ್ರಾಯೋರಿಟಿ ನಂಬರ ಕೊಡುತ್ತೀರಿ. ಈ 10 ಪ್ರಾಯೋರಿಟಿಯಲ್ಲಿ ಎಷ್ಟು ಅನುಷ್ಠಾನ ಆಗಿದೆ ?

ಮಾನ್ಯ ಅಧ್ಯಕ್ಷರು ಈ ಯೋಜನೆಯಡಿ ಚಟುವಟಿಕೆಗಿಂತ ಗುಂಪುಗಳ ಕುರಿತು ಯಾದಿ ಒದಗಿಸಲು ತಿಳಿಸಿ ಇವುಗಳ ಪರಿಶೀಲನೆ ಮಾಡುವದಾಗಿ ಮು.ಕಾ.ನಿ.ಅ.ರವರಿಗೆ ತಿಳಿಸಿದರು.

ಸಮಿತಿ ಸದಸ್ಯ ಶ್ರೀ ಪೈ ರವರು Block ಕಮಿಟಿಯವರು ಒಂದು Model project report ಮಾಡಿ ಇಟ್ಟುಕೊಳ್ಳಬೇಕೆಂದು ತಿಳಿಸಿದರು.

ಮು.ಕಾ.ನಿ.ಅ.ರವರು ತರಬೇತಿಯನ್ನು ಅವರವರ ಆಸಕ್ತಿಗೆ ತಕ್ಕಂತೆ ಕೊಡುತ್ತೇವೆ. ಕುಶಲತೆ ಬಗ್ಗೆ ಕೂಡ ತರಬೇತಿಯನ್ನು ಕೊಡುತ್ತೇವೆ. ನಂತರ ಅವರಿಗೆ ಉದ್ಯೋಗ ಪ್ರಾರಂಭಿಸುವದಕ್ಕಾಗಿ ಸಾಲ ಕೊಡುತ್ತೇವೆಂದು ತಿಳಿಸಿದರು.

ಹಳಿಯಾಳ ತಾ.ಪಂ. ಕಾ.ನಿ.ಅ.ರವರು ತಾಲೂಕಿನ ವಿವರ ನೀಡುತ್ತಾ ತಾಲೂಕಿನಲ್ಲಿ 708 SGSY ಗುಂಪು ಇದೆ. 9400 ಸದಸ್ಯರಿದ್ದಾರೆ ಎಂದು ತಿಳಿಸಿದರು.

ಸಭೆಯಲ್ಲಿ ಒಟ್ಟಾರೆ SGSY ಅನುಷ್ಠಾನ ಸಂಬಂಧಿಸಿದಂತೆ ಸೂಕ್ತ ಮೇಲ್ವಿಚಾರಣೆ ಅವಶ್ಯವಿರುವುದಾಗಿ ಅಭಿಪ್ರಾಯ ವ್ಯಕ್ತವಾಯಿತು.ಹಾಗೂ ಹನೇಹಳ್ಳಿ ಸಹಕಾರ ಸಂಘದಿಂದ ಹಣ ವಿತರಿಸಿದ ಕುರಿತು ಸಮಗ್ರ ವಿಚಾರಣೆ ನಡೆಸುವಂತೆ ಮು.ಕಾ.ನಿ.ಅ.ರವರಿಗೆ ಸೂಚಿಸಿದರು.

**ಇಂದಿರಾ ಆವಾಸ ಯೋಜನೆ**

ಮುಕಾನಿಅ. ಗಳು IAY ದಲ್ಲಿ ಫಲಾನುಭವಿಗಳ ಆಯ್ಕೆಯನ್ನು ಗ್ರಾಮ ಪಂಚಾಯಗಳ ಮುಖಾಂತರ ನಡೆಸುತ್ತೇವೆ. ಈ ಯೋಜನೆಯಲ್ಲಿ ಜಿಲ್ಲೆಯಲ್ಲಿ 75% ಪ್ರಗತಿ ಸಾಧಿಸಲಾಗಿದೆ ಎಂದು ಅಂಕಿಅಂಶಗಳೊಂದಿಗೆ ಸಭೆಗೆ ವಿವರಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡಿ SC/ST ಶೇ. 60% ಸಿಗದೇ ಇದ್ದಲ್ಲಿ ಇದನ್ನು laps ಮಾಡದೇ ಇದನ್ನು ಬೇರೆ ಗ್ರಾಮ ಪಂಚಾಯತಿಗೆ ವರ್ಗಾಯಿಸಲು ಸೂಚಿಸಿದರು. ಒಂದು ತಾಲೂಕಿನಲ್ಲಿ SC/ST ಫಲಾನುಭವಿಗಳು ಸಿಗದೇ ಇದ್ದಲ್ಲಿ ಇನ್ನೊಂದು ತಾಲೂಕಿಗೆ ಇದನ್ನು ವರ್ಗಾಯಿಸಬಹುದು. ಇಲ್ಲದೇ ಹೋದರೆ ಈ ವರ್ಷ ಕೂಡ ಗುರಿ ಸಾಧಿಸಲು ಕಷ್ಟವಾಗುವುದಾಗಿ ಸಭೆಯ ಗಮನಕ್ಕೆ ತಂದರು.

ಮುಂಡಗೋಡ ಕಾ.ನಿ.ಅ.ರವರು ಹನಮನಕೊಪ್ಪದಲ್ಲಿ 109 ಮನೆ ಒಬ್ಬರಿಗೆ ಕೊಟ್ಟ ಬಗ್ಗೆ ದೂರುಗಳಿದ್ದು ಈ ಕುರಿತು ಪರಿಶೀಲಿಸಿ ಸೂಕ್ತ ಕ್ರಮ ಕೈಕೊಳ್ಳುವಂತೆ ಮಾನ್ಯ ಅಧ್ಯಕ್ಷರು ಮು.ಕಾ.ನಿ.ಅ.ರವರಿಗೆ ಸೂಚಿಸಿದರು.

ಸಿದ್ದಾಪೂರ ಕಾ.ನಿ.ಅ.ರವರಿಗೆ ದೊಡ್ಮನೆ ಗ್ರಾಮ ಪಂಚಾಯತಿಯ 27 ಅಂಬೇಡ್ಕರ ಮನೆಯ ಪ್ರಗತಿಯನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಸೂಚಿಸಲಾಯಿತು.

**DRDA Administration :**

ಮುಕಾನಿಅ. ಗಳು ಇದರಡಿ ಬದಲಾವಣೆ ಅಷ್ಟೇ ಮಾಡಬಹುದು. ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಖರ್ಚು ಮಾಡಬಹುದು. ಗ್ರಾಮ ಪಂಚಾಯತಿಗಳಲ್ಲಿ ಕೆಲಸ ನಡೆದಿರುವ ಬಗ್ಗೆ ವೆಬ್-ಸೈಟ್‌ನಲ್ಲಿ ನೋಡಬಹುದಾಗಿ ತಿಳಿಸಿದರು. ಒಬ್ಬ ಫಲಾನುಭವಿಗೆ ಪುನರಾವರ್ತನೆಯಾಗದಂತೆ ನೋಡಿಕೊಳ್ಳಲು data - base ಮೇಲೆ ಮಾಡಲು ತಿಳಿಸಿದರು. ಗ್ರಾಮ ಪಂಚಾಯತಿ ಮತ್ತು ತಾಲೂಕ

(20)

ಪಂಚಾಯತ ಕೆಲಸಗಳ ಬಗ್ಗೆ ವೆಬ್ - ಸೈಟಿನಲ್ಲಿ ಹಾಕಲು ತಿಳಿಸಲಾಯಿತು. ಆಡಳಿತ ನಿರ್ವಹಣೆ ವೆಚ್ಚ ಮತ್ತು ಗ್ರಾಮ ಪಂಚಾಯತಿಯ ಹಣದ ಬಗ್ಗೆ ಎಲ್ಲ ಇಲಾಖೆಯ ಕಾಮಗಾರಿಗಳ ಬಗ್ಗೆ ಗ್ರಾಮ ಪಂಚಾಯತಿಯಲ್ಲಿ ಮಾಹಿತಿ ಲಭ್ಯವಿರಬೇಕೆಂದು ಸೂಚಿಸಲಾಯಿತು. ಇದರಿಂದ ಕಾಮಗಾರಿಗಳ ಪುನಾರಾವರ್ತನೆ ಆಗದಂತೆ ನೋಡಿಕೊಳ್ಳ ಬಹುದಾಗಿದೆ ಎಂದು ಅಭಿಪ್ರಾಯಪಟ್ಟರು.

**PMGSY:**

ಮಾನ್ಯ ಅಧ್ಯಕ್ಷರು ಜಿಲ್ಲೆಯಲ್ಲಿ ಆಗಿರತಕ್ಕ ರಸ್ತೆಗಳಲ್ಲಿ ಎಷ್ಟು ರಸ್ತೆಗಳಿಗೆ ಗ್ರೇಡ್ ಸಿಕ್ಕಿದೆ ? ವಿಚಾರಣೆ ಆಗಿರುವ ಬಗ್ಗೆ ಕೇಳಿದರು ? ಕುಮಟಾ ತಾಲೂಕಿನ ಆನೆಗುಂದಿ ರಸ್ತೆ ವಿಚಾರಣೆ ಆಗಿರುವ ಬಗ್ಗೆ ಕೇಳಿದರು . ಸಮಧಾನಕರ ಅಲ್ಲ ಎಂದು ಬಂದಾಗ ಏನು ಕ್ರಮ ಕೈಕೊಳ್ಳುತ್ತೀರಿ ? ಗುರಿಯ ಹೊರತಾಗಿಯು ಕೆಲವು ಕೆಲಸ ಆಗಿರುವುದಿಲಯೀ ಕುರಿತು ವಿವರ ಬಯಸಿದರು.

ಸಿರ್ಸಿ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರು, ಹಳಿಯಾಳ 2 ರಸ್ತೆ, ಸಿದ್ದಾಪೂರ 2 ರಸ್ತೆ ಕೆಲಸ ಮುಗಿದಿದ್ದು ಸಮಾಧಾನಕರ ಎಂದು ವರದಿ ಬಂದಿರುವುದಾಗಿ ಸಭೆಗೆ ವಿವರಿಸಿದರು.ಜಿಲ್ಲೆಯಲ್ಲಿಯ ಅರಣ್ಯ ಪ್ರದೇಶದಿಂದಾಗಿ ರಸ್ತೆ ಮಾಡಲು ತೊಂದರೆ ಆಗುತ್ತಿರುವುದಾಗಿ ಸಭೆಗೆ ವಿವರಿಸಿದರು.

ಕಾರವಾರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರು, ಬೆಲೂರು, ತಾ:ಕಾರವಾರ, ಮೂಡಶಿರಾಲಿ, ತಾ:ಭಟ್ಕಳ, ಸಣ್ಣ ಕಾವಲು ಕೆಲಸ ಸ್ವಲ್ಪ ಬಾಕಿ ಇದೆ ಎಂದು ತಿಳಿಸಿದರು.

ಮುಕಾನಿಅ: ಈ ಜಿಲ್ಲೆಗೆ ಯೋಜನೆ ಅನುಷ್ಠಾನ ಕುರಿತಂತೆ ಶರತ್ತುಗಳನ್ನು ಸಡಿಲಗೊಳಿಸಲು ಕೂಡ ಸರಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

**IWEP:** IWDP.

ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿ ಕಾಮಗಾರಿ ಕುರಿತಂತೆ ಸಾರ್ವಜನಿಕರಿಂದ ಅಪಸ್ವರಗಳಿರುವುದಾಗಿ ಮಾನ್ಯ ಅಧ್ಯಕ್ಷರುಅಧಿಕಾರಿಗಳ ಗಮನಕ್ಕೆ ತಂದು ಈ ಯೋಜನೆಯಡಿ ಭಟ್ಕಳದಲ್ಲಿ ನಡೆದಿರುವ ಕಾಮಗಾರಿ ಪರಿಶೀಲಿಸುವುದಾಗಿ ತಿಳಿಸಿದರು.

ಸಮಿತಿ ಸದಸ್ಯ ಶ್ರೀ ಪೈ ರವರು ರೂ. 40.00 ಲಕ್ಷ ಖರ್ಚಾದ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸಲು ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಕಾಮಗಾರಿ ಅನುಷ್ಠಾನ ಪೂರ್ವದಲ್ಲಿ ಸಂಬಂಧಿಸಿದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಗ್ರಾಮ ಸಭೆ ಕರೆಯಬೇಕು. ಹಡಿನ ಗ್ರಾಮದಲ್ಲಿ ನಡೆಯುತ್ತಿರುವ ಕಾಮಗಾರಿ ಕುರಿತಂತೆ ಜನರಿಗೆ ಕಲ್ಪನೆ ಕೂಡ ಇಲ್ಲವೆಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

**ಸಂಪೂರ್ಣ ಸ್ವಚ್ಛತಾ ಆಂದೋಲನ:**

ಮುಕಾನಿಅ.ರವರು ಈ ಯೋಜನೆಯಡಿ ಪ್ರತಿಯೊಬ್ಬರೂ ಶೌಚಾಲಯ ಹೊಂದುವುದೇ ಇದರ ಗುರಿ. ಶಾಲೆಯಲ್ಲಿ ಶೌಚಾಲಯ ಹೊಂದಬೇಕು. ಬಯಲಿನಲ್ಲಿ ಮಲವಿಸರ್ಜನೆ ಮಾಡಬಾರದು. ರೂ.500-00 ವ್ಯಕ್ತಿಗತ ಸಹಾಯಧನ (incentive) ಕೊಡುತ್ತಿರುವುದಾಗಿ ತಿಳಿಸಿದರು.

ಸುಧಾ ಗೌಡ ಮಾತನಾಡಿ ಶೌಚಾಲಯ ಕಟ್ಟುವದರೊಂದಿಗೆ ಶೌಚಾಲಯದ ನೀರು ಹಳ್ಳಗಳಿಗೆ ಹೋಗದಂತೆ ಯೋಜನೆ ರೂಪಿಸುವ ಬಗ್ಗೆ ಅಭಿಪ್ರಾಯಪಟ್ಟರು. ತದಡಿಯಲ್ಲಿ ಈ ರೀತಿ ಮಾಡುತ್ತಿದ್ದಾರೆ. ಆ ಹಳ್ಳದ ನೀರು ಮಳೆಗಾಲದಲ್ಲಿ ದೇವಸ್ಥಾನದ ಒಳಗೆ ಬರುತ್ತದೆ. ಗ್ರಾಮ ಪಂಚಾಯತಿ ಕೂಡ ಯಾವುದೇ ಕ್ರಮ ಕೈಕೊಳ್ಳುತ್ತಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಯೋಜನೆಯನ್ನು ಆಶ್ರಯ ಮನೆಗಳಿಗೆ ಕಡ್ಡಾಯ ಮಾಡಲು ತಿಳಿಸಿ ಪೂರ್ಣ ಪ್ರಮಾಣದ ಶೌಚಾಲಯ ನಿರ್ಮಿಸಲು ಸೂಚಿಸಿದರು.

ಜಿಲ್ಲೆಯಲ್ಲಿ ಒಟ್ಟೂ 1,50,000 ಕುಟುಂಬ ಶೌಚಾಲಯ ಹೊಂದಿಲ್ಲ. ನಮ್ಮದು ರಾಜ್ಯದಲ್ಲಿ 6ನೇ ಸ್ಥಾನದಲ್ಲಿದೆ. ಇದರಲ್ಲಿ ಎಲ್ಲರೂ ಆಸಕ್ತಿ ವಹಿಸಿ ಕೆಲಸ ಮಾಡಬೇಕಾಗುತ್ತದೆ ಎಂದು ಮುಕಾನಿಅ.ರವರು ಸಭೆಗೆ ವಿವರಿಸಿದರು.

**ARWS:**

ಕುಡಿಯುವ ನೀರು ಸರಬರಾಜು ಮಾಡತಕ್ಕ ಯೋಜನೆ ಇದಾಗಿದ್ದು, ಶೇ. 89% ಪ್ರಗತಿ ಸಾಧಿಸಿದೆ. ಗ್ರಾಮ ಪಂಚಾಯತಿಗೆ ಹಣ ಬಿಡುಗಡೆ ಮಾಡಲಾಗಿದೆ ಎಂದು ಮುಕಾನಿಅ. ಗಳು ಸಭೆಗೆ ವಿವರಿಸಿದರು.

**ಸ್ವಜಲಧಾರಾ:**

ಈ ಯೋಜನೆ ಕುರಿತಂತೆ ಜಿಲ್ಲೆಗೆ 1.4 ಕೋಟಿ ರೂ.ಗಳ ಯೋಜನಾ ವರದಿ ತಯಾರಿಸಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. 63 ಗ್ರಾಮ ಪಂಚಾಯತಿಗಳಲ್ಲಿ ಜಲನಿರ್ಮಲ 2ನೇ ಹಂತದ ಕಾಮಗಾರಿ ಅಭಿವೃದ್ಧಿಗೆ ಆಯ್ಕೆ ಮಾಡಲಾಗಿದೆ. ಗ್ರಾಮಗಳ ಆಯ್ಕೆಯನ್ನು LPCD ಆಧಾರ ಮೇಲೆ ಮಾಡಲಾಗುತ್ತಿದ್ದು ಕನಿಷ್ಠ 45 LPCD ಗಿಂತ ಕಡಿಮೆ ಇದ್ದಲ್ಲಿ ಮಾತ್ರ ಆಯ್ಕೆ ಮಾಡಬೇಕಾಗಿದೆ ಎಂದು ಮುಕಾನಿಅ. ಗಳು ತಿಳಿಸಿದರು.

ಮಾನ್ಯ ಅಧ್ಯಕ್ಷರು ಮೊಗಟಾ ಗ್ರಾಮದ ಯೋಜನೆ ಕುರಿತು ಮಾಹಿತಿ ನೀಡಲು ಸೂಚಿಸಿದರು.

ಕಮಿಟಿ ಸದಸ್ಯ ಶ್ರೀ ಪೈ ರವರು ಗೋಕರ್ಣದಿಂದ ರಾಜೀವಗಾಂಧಿ ಸಬ್ ಮಿಶನ್ ಅನ್ವಯ ಮೊಗಟಾಕ್ಕೆ ನೀರನ್ನು ಕೊಡುವ ಬಗ್ಗೆ ಕೇಳಿದರು .

ಮುಕಾನಿಅ ರವರು ಮೊಗಟಾ ಮತ್ತು ಗುಂಡಬಾಳದಲ್ಲಿ ಈ ಬಗ್ಗೆ ರೂ.50.00 ಲಕ್ಷದ ವಿಶೇಷ ಯೋಜನೆ ತಯಾರಿಸಲಾಗಿದ್ದು ಪ್ರಸ್ತುತ ಟ್ಯಾಂಕ್ ಮೂಲಕ ನೀರಿನ ವ್ಯವಸ್ಥೆ ಮಾಡಬಹುದೆಂದು ತಿಳಿಸಿದರು.

ಅಂಕೋಲಾ EO: ಜಲನಿರ್ಮಲ ಯೋಜನೆಯಲ್ಲಿ ಹಿಲ್ಲೂರು, ಸಗಡಗೇರಿ ಮತ್ತು ಮೊಗಟಾದಲ್ಲಿ ಸಾರ್ವಜನಿಕ ವಂತಿಗೆ ಸಂಗ್ರಹಿಸಲು ಕ್ರಮಕೈಕೊಳ್ಳಲಾಗಿದೆ ಎಂದು ಸಭೆಗೆ ವಿವರಿಸಿದರು.

ಕಮಿಟಿ ಸದಸ್ಯ ಶ್ರೀ ಪೈ ರವರು ಮುರ್ಡೇಶ್ವರ ನೀರಿನ ಪೂರೈಕೆ ಬಗ್ಗೆ ಕೇಳಲಾಗಿ ಭಟ್ಕಳ ಕಾ.ನಿ.ಅ ರವರು ಭಟ್ಕಳದಲ್ಲಿ ಗ್ರಾಮ ಪಂಚಾಯತದವರು ಕರೆಂಟ್ ಬಿಲ್ ಕಟ್ಟಿಲ್ಲವೆಂದು ಸಭೆಗೆ ವಿವರಿಸಲಾಗಿ ಮಾನ್ಯ ಅಧ್ಯಕ್ಷರು ಯೋಜನೆಗಳಿಗೆ ಮೀಟರ್ ಹಾಕಿ ಬಿಲ್ ನ್ನು ಸರಿಯಾಗಿ ಹಂಚಿಕೆ ಮಾಡಿಕೊಡಲು ತಿಳಿಸಿದರು.

ಕಾ.ನಿ.ಅ ರವರು ಮುಂದುವರೆದು ಗ್ರಾಮ ಪಂಚಾಯತ ದವರಿಗೆ ಸಾಕಷ್ಟು ಸಲ ಈ ಬಗ್ಗೆ ಮನವರಿಕೆ ಮಾಡಿ ತಿಳಿ ಹೇಳಲಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡಿ ಪಂಚಾಯತದವರಿಗೆ ಹೇಳಿ ಮೀಟರ ಹಾಕಿಸಲು ಕ್ರಮ ಕೈಕೊಳ್ಳಲು ತಿಳಿಸಿದರು. ಮೀಟರ ಹಾಕಿದ ಮೇಲೆ 50% ರಿಕವರಿ ಹಣ ಮಾಡಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

**ಜಲನಿರ್ಮಲ ಯೋಜನೆ:**

ಮೊದಲನೇ ಹಂತದಲ್ಲಿ 45 ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಲಾಗಿದೆ. ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಮುಖಾಂತರ ಎಲ್ಲ ಕಾಮಗಾರಿಗಳು ನಡೆಯುತ್ತಿದೆ. ಪ್ರತಿ ಸಾರಿ ಕ್ವಾಲಿಟಿ ಮಾನಿಟರಿಂಗ್ ಕಮಿಟಿ ಕಾಮಗಾರಿ ಪರಿಶೀಲಿಸುತ್ತದೆ. ಬಿಸಲಕೊಪ್ಪದಲ್ಲಿ ವಂತಿಗೆ ಹಣ ಕೊಟ್ಟಿಲ್ಲವೆಂದು ಉಪ ಕಾರ್ಯದರ್ಶಿ (ಆಡಳಿತ) ರವರು ತಿಳಿಸಿದರು.

ಮಾನ್ಯ ಅಧ್ಯಕ್ಷರು ಕಾಮಗಾರಿ ಬಿಲ್ ಪಾವತಿಯಾಗದೇ ಇರುವ ಬಗ್ಗೆ ಕೇಳಲಾಗಿ, ಉಪ ಕಾರ್ಯದರ್ಶಿಯವರು ಗ್ರಾಮ ಪಂಚಾಯತದವರು ಕೆಲಸಕ್ಕೆ ತೊಂದರೆ ಮಾಡುತ್ತಿದ್ದಾರೆ. ಹಣದಲ್ಲಿ ಸಮಸ್ಯೆ ಇಲ್ಲ. ರಸ್ತೆ, ಚರಂಡಿ ಕೆಲಸ ಮಾಡದೇ ಕುಡಿಯುವ ನೀರಿನ ಕೆಲಸ ಪ್ರಾರಂಭ ಮಾಡುವಂತಿಲ್ಲ ವೆಂದು ತಿಳಿಸಿದರು. 75% ಹಣ ಬಿಡುಗಡೆ ಮಾಡಲಾಗಿದೆ. 15% ಹಣ ಸಂಗ್ರಹಿಸಿಲ್ಲದ ಕಾರಣ ಬಹಳಷ್ಟು ಕಡೆಗೆ ಸಮಸ್ಯೆ ಬಂದಿರುವದಾಗಿ ಸಭೆಗೆ ವಿವರಿಸಿದರು.

ಸಿರ್ಸಿ ತಾಲೂಕ ಕಾ.ನಿ.ಅ.ರವರು ಮಾತನಾಡಿ ತಾಲೂಕಿನ ಕೆಲವು ಭಾಗಗಳಲ್ಲಿ ನೀರಿನ ಮೂಲಗಳಿಲ್ಲದ್ದರಿಂದ ಯೋಜನೆ ಅನುಷ್ಠಾನ ಆಗುತ್ತಿಲ್ಲವೆಂದು ತಿಳಿಸಿದರು.

ಸದಸ್ಯ ಶ್ರೀ ಪೈ ರವರು ಈ ಕ್ಷೇತ್ರದಲ್ಲಿ ಎಪ್ರಿಲ್ ಮತ್ತು ಮೇ ದಲ್ಲಿ ತೊಂದರೆ ಆಗುತ್ತಿರುವುದಾಗಿ ತಿಳಿಸಿದರು. ಕಣಸಗಿರಿ, ಅಸ್ನೋಟಿ, ಕಿನ್ನರ, ಸಿದ್ದರ ಗ್ರಾಮಗಳಲ್ಲಿ ಎಪ್ರಿಲ್ ಮತ್ತು ಮೇ ತಿಂಗಳಲ್ಲಿ ಬಹಳ ತೊಂದರೆ ಆಗುತ್ತಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳು ಈ ಕ್ಷೇತ್ರದಲ್ಲಿ ಯಾವ ತರದ ಯೋಜನೆ ಮಾಡಬೇಕೆಂದು ಗ್ರಾಮ ಸಭೆ ತೀರ್ಮಾನ ಮಾಡಬೇಕಾಗುತ್ತದೆ ಎಂದು ತಿಳಿಸಿದರು. ಈ ಕುರಿತು ಗ್ರಾಮ ಸಭೆಗಳಲ್ಲಿ ನಿರ್ಣಯ ಕೈಕೊಂಡು ಪ್ರಸ್ತಾವ ಸಲ್ಲಿಸಲು ಕಾನಿಅ ರವರಿಗೆ ಸೂಚಿಸಲಾಯಿತು.

ಸದಸ್ಯ ಶ್ರೀ ಪೈ ರವರು ಮಾತನಾಡಿ ಜಿಲ್ಲೆಯಲ್ಲಿ 76 ಝರಿ ನೀರು ಯೋಜನೆ ಅನುಷ್ಠಾನಗೊಳ್ಳುತ್ತಿದ್ದು ಅವುಗಳ ವಿವರ ನೀಡಲು ಅಧಿಕಾರಿಗಳಿಗೆ ತಿಳಿಸಿದರು. ಅದರಂತೆ ಜಿಲ್ಲೆಯ ಗ್ರಾಮ, ತಾಲೂಕು

ಹಾಗೂ ಜಿಲ್ಲಾ ಪಂಚಾಯತ SGRY ಕ್ರಿಯಾ ಯೋಜನೆಗಳ ಪ್ರತಿಗಳನ್ನು ಸಮಿತಿ ಸದಸ್ಯರಿಗೆ ಪೂರೈಸಲು ತಿಳಿಸಿದರು. ಮು.ಕಾ.ನಿ.ಅ. ರವರು ಗ್ರಾಮ ಪಂಚಾಯತದ ಕ್ರಿಯಾ ಯೋಜನೆಗಳನ್ನು ತಾಲೂಕಾ ಮಟ್ಟದಲ್ಲಿ ಅನುಮೋದಿಸಲಾಗುತ್ತಿದ್ದು, ಪ್ರಸ್ತುತ ತಾಲೂಕು ಹಾಗೂ ಜಿಲ್ಲಾ ಪಂಚಾಯತದ ಕ್ರಿಯಾ ಯೋಜನೆಗಳ ಪ್ರತಿ ಸಲ್ಲಿಸುವುದಾಗಿ ಸಭೆಗೆ ವಿವರಿಸಿದರು.

ಅದರಂತೆ ಜಾಗ್ರತ ಸಮಿತಿಯ ಸದಸ್ಯರು ತಾಲೂಕಿನಲ್ಲಿ ಪರಿಶೀಲನೆಗಾಗಿ ಬಂದಾಗ ಅವರಿಗೆ ಎಲ್ಲ ಸಹಕಾರ ನೀಡುವಂತೆ ಕಾ.ನಿ.ಅ. ರವರಿಗೆ ಮತ್ತು ಸ.ಕಾ.ನಿ.ಅ. ರವರಿಗೆ ಸೂಚಿಸಲಾಯಿತು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ ಕೇಂದ್ರದ ಯೋಜನೆ ಬಗ್ಗೆ ಸವಿಸ್ತಾರವಾದ ಚಟುವಟಿಕೆಗಳ ಬಗ್ಗೆ ಇದುವರೆಗೆ ಪರಿಶೀಲನೆ ಮಾಡಿರುವ ಮಾನ್ಯ ಲೋಕಸಭಾ ಸದಸ್ಯರಿಗೆ ಜಿಲ್ಲಾ ಆಡಳಿತದ ಪರವಾಗಿ ಧನ್ಯವಾದವುಗಳನ್ನು ಅರ್ಪಿಸಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಜಾಗ್ರತ ಸಮಿತಿಯ ಇತರ ಸದಸ್ಯರಿಗೆ, ಜಿಲ್ಲಾಧಿಕಾರಿಗಳಿಗೆ ಮತ್ತು ಇತರ ಎಲ್ಲ ಅಧಿಕಾರಿಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಅಧ್ಯಕ್ಷರು
ಕೇಂದ್ರ ಜಾಗ್ರತಾ ಹಾಗೂ ಮೇಲ್ವಿಚಾರಣಾ ಸಮಿತಿ,
ಹಾಗೂ ಲೋಕಸಭಾ ಸದಸ್ಯರು, ಕ್ಯಾನರಾ ಕ್ಷೇತ್ರ, ಕಾರವಾರ.

ಪ್ರತಿಯನ್ನು ಗೌರವಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ:

1. ಆಪ್ತ ಕಾರ್ಯದರ್ಶಿಗಳು ಶ್ರೀ ಅನಂತಕುಮಾರ ಹೆಗಡೆ, ಮಾನ್ಯ ಲೋಕಸಭಾ ಸದಸ್ಯರು, ಕೆನರಾ ಕ್ಷೇತ್ರ, ಕಾರವಾರ
2. ಶ್ರೀ ಆರ್. ವಿ. ದೇಶಪಾಂಡೆ, ಮಾನ್ಯ ವಿಧಾನ ಸಭಾ ಸದಸ್ಯರು, ಹಳಿಯಾಳ
3. ಶ್ರೀ ವಿವೇಕಾನಂದ ವೈದ್ಯ, ಮಾನ್ಯ ವಿಧಾನ ಸಭಾ ಸದಸ್ಯರು, ಶಿರ್ಸಿ
4. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾನ್ಯ ವಿಧಾನ ಸಭಾ ಸದಸ್ಯರು, ಅಂಕೋಲಾ
5. ಶ್ರೀ ಗಂಗಾಧರ ಭಟ್, ಮಾನ್ಯ ವಿಧಾನ ಸಭಾ ಸದಸ್ಯರು, ಕಾರವಾರ
6. ಶ್ರೀ ಮೋಹನ ಕೆ. ಶೆಟ್ಟಿ, ಮಾನ್ಯ ವಿಧಾನ ಸಭಾ ಸದಸ್ಯರು, ಕುಮಟಾ
7. ಶ್ರೀ ಶಿವಾನಂದ ನಾಯ್ಕ, ಮಾನ್ಯ ವಿಧಾನ ಸಭಾ ಸದಸ್ಯರು, ಭಟ್ಕಳ
8. ಶ್ರೀಮತಿ ಶುಭಲತಾ ಅಸ್ನೋಟಿಕರ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಕಾರವಾರ
9. ಜಿಲ್ಲೆಯ ಎಲ್ಲಾ ತಾಲೂಕ ಪಂಚಾಯತ ಅಧ್ಯಕ್ಷರು
10. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ, ಉ.ಕ. ಕಾರವಾರ
11. ಯೋಜನಾ ನಿರ್ದೇಶಕರು, ಜಿಲ್ಲಾ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಕಾರವಾರ
12. ಶ್ರೀ ಬಿ. ಎಸ್.ಪೈ ವಕೀಲರು. ಎಂ.ಜಿ. ರಸ್ತೆ, ಕಾರವಾರ
13. ಶ್ರೀಮತಿ ಸುಧಾ ಗೌಡ, ವಿವೇಕಾನಂದ ನಗರ, ಕುಮಟಾ
14. ಶ್ರೀ ಅಮರ ನೆರಲಕಟ್ಟಿ, ಬಚಗಾಂವ, ಚಿಪಗಿ, ಶಿರಸಿ.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ನಡವಳಿಗಳ ಮೇಲೆ ಅನುಪಾಲನಾ ವರದಿ ಸಲ್ಲಿಸಲು ತಿಳಿಸಿ ರವಾನಿಸಿದೆ.

1. ಉಪ ಕಾರ್ಯದರ್ಶಿ (ಆಡಳಿತ/ಅಭಿವೃದ್ಧಿ), ಯೋಜನಾ ನಿರ್ದೇಶಕರು, (ಎಸ್‌ಜಿಎಸ್‌ವೈ/ಡಿಆರ್‌ಡಿಎ), ಜಿ. ಪಂ. ಕಾರವಾರ
2. ಕಾರ್ಯನಿರ್ವಾಹಕ ಅಭಿಯಂತರರು, ಪಂ. ರಾಜ್ ಇಂಜಿನಿಯರಿಂಗ ವಿಭಾಗ, ಕಾರವಾರ/ಸಿರ್ಸಿ
3. ಜಿಲ್ಲೆಯ ಎಲ್ಲ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು
4. ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಮುಂಡಗೋಡ
5. ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆ, ಕಾರವಾರ/ಸಿರ್ಸಿ
6. ಸಹಾಯಕ ಕಮೀಶನರ್, ಕಾರವಾರ/ಕುಮಟಾ/ಭಟ್ಕಳ/ಶಿರಸಿ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಯತ, ಉ.ಕ. ಕಾರವಾರ.